ಮುಖ್ಯಮಂತ್ರಿಗಳಾಗಿದ್ದಾಗ ಅವರೂ ಕೂಡ ಮಾಡಿದ್ದಾರೆ, ಅದಕ್ಕೆ ಅನುಗುಣವಾಗಿ ನಾವು ಮಾಡುತ್ತಿದ್ದೇವೆ ಮತ್ತು ಇದರಲ್ಲಿ ಪೂರ್ಣವಾದ ಯಶಸ್ಸನ್ನು ಪಡೆದಿದ್ದೇವೆ, ಜನರ ಅಭಿವೃದ್ಧಿಗೋಸ್ಕರ, ಜನರ ಸಹಕಾರಕ್ಕೋಸ್ಕರ, ದೇಶದ ಅಭಿವೃದ್ಧಿಗೋಸ್ಕರ ಯೋಜನೆಯನ್ನು ನಾವು ಪರಿಪೂರ್ಣವಾಗಿ ಮಾಡಿದ್ದೇವೆಂದು ಸರ್ಕಾರದ ಪರವಾಗಿ ಅವರಿಗೆ ಹೇಳುತ್ತಿದ್ದೇನೆ.

ಬೆಂಗಳೂರು ನಗರದಲ್ಲಿ ನಿವೇಶನಗಳ ಹಂಚಿಕೆ

98 (318) ಶ್ರೀ ಕೆ.ಎಂ. ಲಿಂಗಪ್ಪ (ರಾಮನಗರ):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಲಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಎಷ್ಟು ಜನರಿಗೆ ನಿವೇಶನಗಳನ್ನು ಕೊಡಬೇಕಾದ ಅವಶ್ಯಕತೆ ಇದೆ;

ಆ) ನಿವೇಶನಗಳನ್ನು ಕೋರಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಎಷ್ಟು ಜನರು ಅರ್ಜಿ ಸಲ್ಲಿಸಿದ್ದಾರೆ.;

ಇ) ಎಷ್ಟು ಜನರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇಶನ ನೀಡಲು ಹಾಕಿಕೊಂಡಿರುವ ಯೋಜನೆಗಳಾವುವು;

ಈ) ಬೆಂಗಳೂರು ಹಾಗೂ ಸುತ್ತಮುತ್ತಲೂ ಇರುವ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಹೊರತುಪಡಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರೇ ನಿವೇಶನಗಳನ್ನು ಹಂಚಲು ಸಮರ್ಥರಿದ್ದಾರೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ನಗರದಲ್ಲಿ ಎಷ್ಟು ಜನರಿಗೆ ನಿವೇಶನದ ಅವಶ್ಯಕತೆ ಇದೆ ಎನ್ನುವ ಬಗ್ಗೆ ಸರ್ವೆ ಮಾಡಲಾಗುವುದಿಲ್ಲ.

ಆ) ನಿವೇಶನಗಳನ್ನು ಕೋರಿ ಒಟ್ಟು 86,988 ಜನರು ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಇ) ಸರ್ಕಾರವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಒಟ್ಟು 11 ಹೊಸ ಬಡಾವಣೆಗಳನ್ನು ನಿರ್ಮಿಸುವ ಯೋಜನೆಗಳಿಗೆ ಮಂಜೂರಾತಿ ನೀಡಿದೆ. ಈ ಬಡಾವಣೆಗಳಲ್ಲಿ ಒಟ್ಟು 8207 ಎಕರೆ 35 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ನಿವೇಶನ ಹಂಚಲು ಕ್ರಮ ಕೈಗೊಳ್ಳಲಾಗುವುದು.

ಈ) ಹೌದು.

ಶ್ರೀ ಸಿ.ಎಂ. ಲಿಂಗಪ್ಪ:– ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮತ್ತು ಸುತ್ತಮುತ್ತಲಿರತಕ್ಕ ಗೃಹನಿರ್ಮಾಣ ಸಹಕಾರಿ ಸಂಘಗಳನ್ನು ಹೊರತುಪಡಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇಶನಗಳನ್ನು ಹಂಚತಕ್ಕ ಸಾಮರ್ಥ್ಯ ಹೊಂದಿದ್ದಾರೆಯೇ ಎನ್ನತಕ್ಕ ಪ್ರಶ್ನೆಗೆ ಉತ್ತರದಲ್ಲಿ ಹೌದು ಎಂದು ಕೊಟ್ಟಿದ್ದಾರೆ. ಆದರಲ್ಲಿ ಇದು ಒಂದು ಜಟಿಲವಾದಂಥ ಸಮಸ್ಯೆ. ಬೆಂಗಳೂರು ಹಾಗೂ ಸುತ್ತಮುತ್ತಲೂ ಸುಮಾರು 100 ಗೃಹನಿರ್ಮಾಣ ಸಹಕಾರ ಸಂಘಗಳು ಕೆಲಸ ಮಾಡುತ್ತಿವೆ. ಸರ್ಕಾರ ಈಗಾಗಲೇ ಬಿ.ಡಿ.ಎ. ವತಿಯಿಂದ ಸುಮಾರು 8 ಸಾವಿರ ಎಕರೆ ಭೂಮಿಯನ್ನು ಅವರಿಗೆ ಸ್ವಾಧೀನಪಡಿಸಿಕೊಟ್ಟು ಅವರು ಬಡಾವಣೆಗಳನ್ನು ನಿರ್ಮಿಸುವುದಕ್ಕೆ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಈ

ಉತ್ತರದ ಅರ್ಥ ಅವರಿಗೆ ಸ್ವಾಧೀನ ಮಾಡಿಕೊಟ್ಟಿರುವಂಥ ಜಮೀನನ್ನು ಹೊರತುಪಡಿಸಿ, ಆ ಜಮೀನುಗಳಲ್ಲಿ ಅವರಿಗೆ ನಿವೇಶನಗಳನ್ನು ಹಂಚುವುದಕ್ಕೆ ಅವಕಾಶ ಮಾಡಿಕೊಟ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಉಳಿದ ಭಾಗದಲ್ಲಿ ನಿವೇಶನಗಳನ್ನು ಹಂಚುತ್ತಾರೆಯೆ ? ಎನ್ನತಕ್ಕ ಪ್ರಶ್ನೆಯನ್ನು ಕೇಳುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಪ್ರಕಾರ 8,207 ಎಕರೆ 35 ಗುಂಟೆ ಜಾಗವನ್ನು ಸ್ವಾಧೀನ ಪಡಿಸಬೇಕು ಎಂದು ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. 1988ರಲ್ಲಿ ನಾವು ನೋಟಿಫಿಕೇಷನ್ ಕೊಟ್ಟ ಪ್ರಕಾರ ಅದಕ್ಕೆ 86,988 ಅರ್ಜಿಗಳು ಈಗ ಇದೆ. ನಿಜವಾಗಿಯೂ ನಾವು ಎಲ್ಲಾ ಜಾಗವನ್ನು ಸ್ವಾಧೀನಕ್ಕೆ ತೆಗೆದುಕೊಂಡರೆ ಸುಮಾರು 1,23,000 ಸೈಟ್‌ಗಳನ್ನು ನಾವು ನಿಗದಿಪಡಿಸುವುದಕ್ಕೆ ಸಾಧ್ಯವಿದೆ. ಆದರೆ ಇದರಲ್ಲಿ ಕೆಲವು ರೆಗ್ಯುಲರೈಜೇಷನ್ ಮಾಡಿರುವುದು. ಮತ್ತೆ ಅದರಲ್ಲಿ ಕೆಲವು ಆಕ್ಯುಪೈ ಮಾಡಿದಂಥ ಜಾಗಗಳು ಇವೆ. ಆದರೂ ಕೂಡ ಒಂದು ಸಾವಿರ ಎಕರೆ ಅವಾರ್ಡ್ ಸ್ಟೇಜ್‌ನಲ್ಲಿ ಇದೆ. ಉಳಿದದ್ದು ಫೈನಲ್ ನೋಟಿಫಿಕೇಷನ್ ಸ್ಟೇಜ್‌ನಲ್ಲಿ ಇದೆ. ಎರಡನ್ನೂ ಕ್ಯಾಬಿನೆಟ್‌ನಲ್ಲಿ ಇಟ್ಟು ಇದರ ಬಗ್ಗೆ ಯು.ಎಲ್.ಸಿ.ಯಲ್ಲಿ ತೆಗೆದುಕೊಳ್ಳಬೇಕೆ, ಅಥವಾ ಭೂ ಸ್ವಾಧೀನ ಮಾಡಿ ಅದನ್ನು ತೆಗೆದುಕೊಳ್ಳಬೇಕೆ ಎಂಬ ಒಂದು ವಿವಾದದಿಂದಲೇ ಬಹುಶಃ ಎರಡು ಮೂರು ವರ್ಷಗಳ ಕಾಲ ಇದು ನೆನೆಗುದಿಗೆ ಬಿದ್ದಿತ್ತು. ಈ ಬಗ್ಗೆ ಕ್ಯಾಬಿನೆಟ್‌ನಲ್ಲಿ ಅಂತಿಮವಾದಂತಹ ನಿರ್ಣಯವನ್ನು ತೆಗೆದುಕೊಂಡು ಭೂಸ್ವಾಧೀನ ಕಾರ್ಯಕ್ರಮ ಏನು ಇದೆ ಅವಾರ್ಡ್ ಸ್ಟೇಜ್‌ನಲ್ಲಿರುವುದನ್ನು ಅಥವಾ ಫೈನಲ್ ನೋಟಿಫಿಕೇಷನ್ ಸ್ಟೇಜ್‌ನಲ್ಲಿರುವುದನ್ನು ನೋಟಿಫೈ ಮಾಡಬೇಕು; ಎಂದು ಹೇಳಿ ಈಗಾಗಲೇ ನಿರ್ಣಯವನ್ನು ತೆಗೆದುಕೊಂಡಿರುವುದರಿಂದ ಈ ರೀತಿಯ ಆಡೆತಡೆಗಳು ಕೂಡ ತೆರವಾಗಿದೆ. ಆದುದರಿಂದ ಮುಂದಿನ ಕಾರ್ಯಕ್ರಮ ತೆಗೆದುಕೊಂಡು ಯಾರು ಅರ್ಜಿಗಳನ್ನು ಹಾಕಿದ್ದಾರೆ ಆ ಅರ್ಜಿಗಳನ್ನು ಪರಿಶೀಲನೆ ಮಾಡಿ ಇವುಗಳನ್ನು ಹಂಚುವಂತಹ ಕಾರ್ಯಕ್ರಮವನ್ನು ಮಾಡುತ್ತೇನೆ.

ಪಡಿತರ ವ್ಯವಸ್ಥೆಯಲ್ಲಿ ಅವಶ್ಯಕ ಆಹಾರ ಸಾಮಗ್ರಿಗಳ ವಿತರಣೆಯ ಪ್ರಮಾಣ

99 (934) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):–

ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹಸಿರು ಕಾರ್ಡುಗಳನ್ನು ಬದಲಿಸಿ ಪಡಿತರ ವ್ಯವಸ್ಥೆಯ ಮೂಲಕ ಪ್ರತಿ ತಿಂಗಳು ವಿತರಣೆ ಮಾಡುತ್ತಿರುವ ಅಕ್ಕಿ, ಗೋಧಿ, ಸಕ್ಕರೆ ಮತ್ತು ಸೀಮೆಎಣ್ಣೆ ಪದಾರ್ಥಗಳ ಪ್ರಮಾಣ ಎಷ್ಟು; (1992–93ನೇ ಸಾಲಿನಲ್ಲಿ ಪ್ರತಿ ತಿಂಗಳ ವಿವರ ನೀಡುವುದು);

ಆ) ಈ ಪ್ರಮಾಣ ಕಳೆದ ವರ್ಷಕ್ಕಿಂತ ಕಡಿಮೆ ಇದೆಯೇ ಹಾಗಿದ್ದಲ್ಲಿ ಕಾರಣವೇನು;

ಇ) ಈಗಿರುವ ಹಸಿರು ಬಣ್ಣದ ಪಡಿತರ ಕಾರ್ಡುಗಳನ್ನು ಬದಲಾಯಿಸಿ, ತ್ರಿವರ್ಣದ ಕಾರ್ಡುಗಳನ್ನು ಕೊಡುತ್ತಿರುವುದರಿಂದ, ಕಾರ್ಡುಗಳ ಸಂಖ್ಯೆ ಹೆಚ್ಚಾಗುವುದರ ಪ್ರಮಾಣದಲ್ಲಿಯೇ ಆಹಾರ ಸಾಮಗ್ರಿಗಳ ಪ್ರಮಾಣವನ್ನು ಹೆಚ್ಚಿಸಲಾಗಿದೆಯೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) 1992–93ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಹಸಿರು ಕಾರ್ಡುಗಳನ್ನು ಬದಲಿಸಿ ವಿತರಣೆ ಮಾಡಿರುವ ಪ್ರತಿ ತ್ರಿವರ್ಣ ಪಡಿತರ ಚೀಟಿಗಳಿಗೆ ಪ್ರತಿ ತಿಂಗಳು ಪಡಿತರ ವ್ಯವಸ್ಥೆಯ ಮೂಲಕ ಈ